ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಸಿಎಫ್‌ಟಿ(4)/ 20 /2020-21 ದಿನಾಂಕ:24-07-2020.

## ಸುತ್ತೋಲೆ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಕಿಲ್ಡ್ ಅಸಿಸ್ಟೆಂಟ್,(Skilled Assistant) ಗಳಿಗೆ ಸ್ಕಿಲ್ಡ್ ಟ್ರೇಡ್ಸ್‌ಮನ್,(Skilled Tradesman ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ : ನಿರ್ದೇಶನಾಲಯದ ಅ.ಜ್ಞಾ ಪತ್ರ ಸಂಖ್ಯೆ: ಸಿಎಫ್‌ಟಿ(4) 20 /2020-21 ದಿನಾಂಕ: 18.06.2020 ಅಂತಿಮ ಜೇಷ್ಠತಾ ಪಟ್ಟಿಯಂತೆ.

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಕಿಲ್ಡ್ ಅಸಿಸ್ಟೆಂಟ್,(Skilled Assistant) ಗಳ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಉಲ್ಲೇಖಿತ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪ್ರಚುರ ಪಡಿಸಿದ್ದು, ಜ್ಯೇ.ಸಂ: 01 ರಿಂದ 07 ರ ವರೆಗಿನ ಸ್ಕಿಲ್ಡ್ ಅಸಿಸ್ಟೆಂಟ್ ನೌಕರರುಗಳಿಗೆ, ಖಾಲಿ ಇರುವ ಸ್ಕಿಲ್ಡ್ ಟ್ರೇಡ್ಸ್‌ಮನ್,(Skilled Tradesman) ಹುದ್ದೆಗೆ ಪದೋನ್ನತಿಯನ್ನು ನೀಡುವ ಸಲುವಾಗಿ ಈ ಕೆಳಕಂಡ ಅವಶ್ಯ ದಾಖಲೆಗಳನ್ನು ದಿನಾಂಕ:5-8-20 ರ ಒಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ನಿಗಧಿತ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪದೋನ್ನತಿಗೆ ಪರಿಗಣಿಸಲಾಗುವುದಿಲ್ಲ.

1. ನೇಮಕಾತಿ ಆದೇಶ ಪ್ರತಿ.
2. ಖಾಯಂಪೂರ್ವ ಸೇವಾವಧಿ ಘೋಷಣೆ ಪತ್ರ.
3. ಕನ್ನಡ ಭಾಷಾ ವಿನಾಯತಿ ಪ್ರಮಾಣ ಪತ್ರ ನಮೂನೆ 5(5).
4. ಎಸ್.ಎಸ್.ಎಲ್.ಸಿ. ಅಂಕಪಟ್ಟಿ
5. ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್
6. ಐದು (5) ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು 2015-16 ರಿಂದ 2019-20 ನೇ ಸಾಲಿನವರೆಗೆ
7. ಇಲಾಖಾ ವಿಚಾರಣೆ / ನ್ಯಾಯಾಲಯ ಪ್ರಕರಣಗಳು/ಅನಧಿಕೃತ ಗೈರು ಹಾಜರಿ/ ಬಾಕಿ ಇಲ್ಲದ ಬಗ್ಗೆ ದೃಢೀಕೃತ ಪ್ರತಿ.
8. ಪ.ಜಾತಿ / ಪ.ಪಂಗಡದ ನೌಕರರು ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕೃತ ಜಾತಿ ಪ್ರಮಾಣ ಪತ್ರ ನೀಡುವುದು.

**ವಿಸೂ:** ಸ್ಕಿಲ್ಡ್ ಅಸಿಸ್ಟೆಂಟ್ ವೃಂದದಲ್ಲಿ, ಕನಿಷ್ಠ ಐದು(05) ವರ್ಷ ಸೇವೆ ಸಲ್ಲಿಸಿರುವ ನೌಕರರುಗಳು ಮಾತ್ರ ನಿಗದಿತ ದಿನಾಂಕದೊಳಗೆ ಮೇಲಿನ ಎಲ್ಲಾ ದಾಖಲಾತಿಗಳನ್ನು ಸಲ್ಲಿಸುವುದು, ಸಲ್ಲಿಸದೇ ಇದ್ದ ಪಕ್ಷದಲ್ಲಿ, ಪದೋನ್ನತಿಯನ್ನು ತಿರಸ್ಕರಿಸಿರುವುದಾಗಿ ಪರಿಗಣಿಸಲಾಗುವುದು.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಆಯುಕ್ತರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು
2. ನಿರ್ದೇಶಕರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು
4. ಡೀನ್ ಮತ್ತು ನಿರ್ದೇಶಕರು, ________________ ವಿಜ್ಞಾನ ಸಂಸ್ಥೆ,____________ಜಿಲ್ಲೆ.
5. ಎಲ್ಲಾ ಜಿಲ್ಲಾ ವಿಭಾಗೀಯ ಸಹ ನಿರ್ದೇಶಕರು, ______________ ವಿಭಾಗ,
6. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ______________ ಜಿಲ್ಲೆ
7. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ____________________ ಜಿಲ್ಲೆ
8. ಹಿರಿಯ ಪ್ರೋಗ್ರಾಮರ್, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ, ಬೆಂಗಳೂರು- ಸದರಿ ಸುತ್ತೋಲೆಯನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಕಚೇರಿ ಪ್ರತಿ.